ಕನ್ನಡಪ್ರಭ
ಸೋಮವಾರ 3.2.2020
ಬೆಂಗಳೂರು

ಸಣ್ ಸುದ್ದಿ

2ನೇ ಕೊರೋನಾ ಕೇಸ್ ಪತ್ತೆ

ಮೊದಲ ಪುಟದಿಂದ

ಇನ್ನು ಈ ಬಗ್ಗೆ ಮಾತನಾಡಿದ ಕೇರಳ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ, 'ವುಹಾನ್ ವಿಶ್ವವಿದ್ಯಾಲಯದಿಂದ ಮರಳಿದ ವಿದ್ಯಾರ್ಥಿ ಯೊಬ್ಬನಿಗೆ ಕೊರೋನಾ ವೈರಸ್ ಅಂಟಿರುವ ವಿಷಯ ತಿಳಿದುಬಂದಿದೆ. ಪುಣೆಯ ರಾಷ್ಟ್ರೀಯ ರೋಗ ಸೂಕ್ಷ್ಮಾಣು ಸಂಸ್ಥೆಗೆ ಈತನ ರಕ್ತ ಮಾದರಿ ಕಳಿಸಲಾಗಿತ್ತು. ರೋಗ ಅಂಟಿರುವುದನ್ನು ಸಂಸ್ಥೆ ದೃಢಪಡಿಸಿದೆ. ವಿದ್ಯಾರ್ಥಿ ಸದ್ಯ ಆಲಪ್ಪುಳ ಆಸ್ಪತ್ರೆಯಲ್ಲಿ ಆತ ಚಿಕಿತ್ಸೆ ಪಡೆಯುತ್ತಿದ್ದಾನೆ. ಜನವರಿ 24ರಂದು ಈತ ಚೀನಾದಿಂದ ಬಂದಿದ್ದ. ಆತನ ಆರೋಗ್ಯದ ಮೇಲೆ ತೀವ್ರ ನಿಗಾ ವಹಿಸಲಾಗಿದೆ' ಎಂದಿದ್ದಾರೆ. 'ಈತನಿಗೆ ಸಣ್ಣ ಪ್ರಮಾಣದಲ್ಲಿ ವೈರಾಣು ಅಂಟಿರುವುದು ಗೊತ್ತಾಗಿದೆ. ಆದರೆ ಅದನ್ನು ನಾವು ಲಘುವಾಗಿ ಪರಿಗಣಿಸದೇ ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ' ಎಂದರು. ಚೀನಾದಿಂದ ಮರಳಿದ 1793 ಜನರನ್ನು ನಿಗಾದಲ್ಲಿ ಕೇರಳದಲ್ಲಿ ನಿಗಾದಲ್ಲಿ ಇರಿಸಲಾಗಿದೆ ಎಂದು ಸರ್ಕಾರ ತಿಳಿಸಿದೆ.

ಚೀನಾದಿಂದ ಸುರಕ್ಷಿತವಾಗಿ ಹಿಂತಿರುಗಿದ ಯೋಗ ಶಿಕ್ಷಕರು

ದೊಡ್ಡಬಳ್ಳಾಪುರ: ಕೊರೋನಾ ವೈರಸ್ ಸೋಂಕಿನಿಂದ ತತ್ತರಿಸಿರುವ ಚೀನಾದಲ್ಲಿ ಯೋಗ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿರುವ ದೊಡ್ಡಬಳ್ಳಾಪುರದ ಎಚ್.ಜಿ.ರಘು ಮತ್ತು ಆರ್. ಹರೀಶ್ ತವರಿಗೆ ಮರಳಿದ್ದಾರೆ. ಚೀನಾ ಸೇರಿ ಮೂರು ಕಡೆಯ ವಿಮಾನ ನಿಲ್ದಾಣಗಳಲ್ಲಿ ನಡೆಸಿದ ಎಲ್ಲ ರೀತಿಯ ಆರೋಗ್ಯ ತಪಾಸಣೆಯಲ್ಲೂ ಯಾವುದೇ ರೀತಿಯ ಸೋಂಕು ಇಲ್ಲವೆಂದು ದೃಢಪಟ್ಟಿದೆ ಎಂದು ಅವರು ತಿಳಿಸಿದ್ದಾರೆ. ಇಲ್ಲಿನ ನಿಸರ್ಗ ಯೋಗ ಕೇಂದ್ರದಲ್ಲಿ ತರಬೇತಿ ಪಡೆದು ಐದು ವರ್ಷಗಳಿಂದ ಚೀನಾದ ಶಾಂಘೈ ನಗರದ ಎಸ್. ಯೋಗ ಮತ್ತು ರಿಕ್ರಿಯೇಷನ್ ಸಂಸ್ಥೆಯಲ್ಲಿ ಎಚ್.ಜಿ.ರಘು ಕಾರ್ಯನಿರ್ವಹಿಸುತ್ತಿದ್ದಾರೆ. ಹುಟ್ಟೂರಿಗೆ ಸುರಕ್ಷಿತವಾಗಿ ಆಗಮಿಸಿದ ಅವರು ಮಾತನಾಡಿ, ಚೀನಾದಲ್ಲಿ ಈಗ ರಜೆಯ ಸಮಯ. ಪ್ರತಿವರ್ಷ ನಾವು ಜನವರಿಯಲ್ಲಿ ರಜೆಗಾಗಿ ಊರಿಗೆ ಬಂದು ಫೆ.1ರಂದು ವಾಪಸಾಗುತ್ತಿದ್ದೆವು. ಆದರೆ ಈ ಬಾರಿ ಕೊರೋನಾ ವೈರಸ್ ಸೋಂಕಿನಿಂದಾಗಿ ವಿಳಂಬವಾಯಿತು. ಇನ್ನೂ ಅಲ್ಲಿ ಪರಿಸ್ಥಿತಿ ತಹಬದಿಗೆ ಬಂದಿಲ್ಲ ಎಂದರು.

ರಾಜ್ಯದಲ್ಲಿ ಮದ್ಯಮುಕ್ತ ಗ್ರಾಪಂಗೆ ಚಿಂತನೆ: ಈಶ್ವರಪ್ಪ

ಹಳೇಬೀಡು: ರಾಜ್ಯದಲ್ಲಿ ಮದ್ಯಮುಕ್ತ ಗ್ರಾಮ ಪಂಚಾಯ್ತಿ ನಿರ್ಮಾಣ ಮಾಡಲು ಸರ್ಕಾರ ಆಲೋಚನೆ ನಡೆಸಿದೆ ಎಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು. ಹಳೇಬೀಡಿನಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸಿರಿಗೆರೆ ಮಠವು ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಮದ್ಯವರ್ಜನಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಕೂಡ ಚಿಂತನೆ ನಡೆಸುತ್ತಿದೆ ಎಂದರು.

ಮೊಸಳೆ ಬಾಯಿಗೆ ಸಿಲುಕಿ ಪಾರಾದ ಮೀನುಗಾರ

ಸುರಪುರ: ಕೃಷ್ಣಾ ನದಿಯಲ್ಲಿ ಮೊಸಳೆ ಬಾಯಿಗೆ ಸಿಲುಕಿದ್ದ ಮೀನುಗಾರನೊಬ್ಬ ಸಿನಿಮೀಯ ರೀತಿಯಲ್ಲಿ ತಪ್ಪಿಸಿಕೊಂಡು ಈಜಿ ಪಾರಾದ ಘಟನೆ ಯಾದಗಿರಿ ಜಿಲ್ಲೆ ಸುರಪುರ ತಾಲೂಕಿನ ಹೇಮನೂರು ಸಮೀಪ ಭಾನುವಾರ ಬೆಳಗ್ಗೆ ನಡೆದಿದೆ. ತಾಲೂಕಿನ ಸುರಪುರದ ಬೋವಿಗಲ್ಲಿಯ ಜಟ್ಟೆಪ್ಪ ನಾಗಪ್ಪ (40) ಮೊಸಳೆ ಬಾಯಿಂದ ಪಾರಾದ ಮೀನುಗಾರ. ಭಾನುವಾರ ಬೆಳಗ್ಗೆ ಜಟ್ಟೆಪ್ಪ ನಾಗಪ್ಪ ಎಂದಿನಂತೆ ಟ್ಯೂಬ್‌ಗಳ ಸಹಾಯದಿಂದ ನದಿಯ ಮಧ್ಯೆ ಹೋಗಿ ಬಲೆ ಬೀಸಿ ಮೀನು ಹಿಡಿದಿದ್ದಾನೆ. ಆ ಬಳಿಕ ಮೊಸಳೆ ಬಾಯಿಗೆ ಸಿಲುಕಿದ್ದಾನೆ. ನಂತರ ಕಷ್ಟಪಟ್ಟು ತಪ್ಪಿಸಿಕೊಂಡು ಬಂದಿದ್ದಾನೆ.

ಆರ್ಥಿಕ ಸಮಸ್ಯೆಯಲ್ಲಿರುವ ರಾಜ್ಯಕ್ಕೆ ಗಾಯದ ಮೇಲೆ ಬರೆ

ಕೇಂದ್ರ ಸರ್ಕಾರದ ತೆರಿಗೆ ಪಾಲು ಕಡಿತ | ಮುಂದಿನ ತಿಂಗಳು ಯಡಿಯೂರಪ್ಪ ಮಂಡಿಸಲಿರುವ ರಾಜ್ಯ ಬಜೆಟ್‌ಗೆ ಸಮಸ್ಯೆ ಸಾಧ್ಯತೆ

- **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬರುವ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದ ತೆರಿಗೆಯಲ್ಲಿನ ರಾಜ್ಯದ ಪಾಲು ಸುಮಾರು ಒಂಬತ್ತು ಸಾವಿರ ಕೋಟಿ ರು.ಗಳಷ್ಟು ಕಡಿಮೆಯಾಗಲಿರುವುದರಿಂದ ಈಗಾಗಲೇ ಆರ್ಥಿಕ ಸಮಸ್ಯೆ ಎದುರಿಸುತ್ತಿರುವ ರಾಜ್ಯಕ್ಕೆ ಗಾಯದ ಮೇಲೆ ಬರೆ ಎಳೆದಂತಾಗಿದ್ದು, ಮುಂಬರುವ ರಾಜ್ಯ ಬಜೆಟ್ ಸಿದ್ಧತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ.

ಈಗಾಗಲೇ ಆದಾಯ ಕೊರತೆ, ತೆರಿಗೆ ಸಂಗ್ರಹದಲ್ಲಿ ಇಳಿಮುಖ, ವೇತನ ನೀಡಲು ಕಷ್ಟಪಡುವಂತಹ ಸ್ಥಿತಿಯನ್ನು ರಾಜ್ಯ ಸರ್ಕಾರ ಎದುರಿಸುತ್ತಿದೆ. ಕಳೆದ ಆಗಸ್ಟ್ 2019ರ ನೆರೆಯಿಂದಾಗಿ ಬಹುತೇಕ ಇಲಾಖೆಗಳ ಅನುದಾನವನ್ನು ನೆರೆ ಪರಿಹಾರ ಕಾರ್ಯಗಳಿಗೆ ವರ್ಗಾಯಿಸಲಾಗಿದೆ. ಆದಾಯ ಸಂಗ್ರಹಿಸಬೇಕಾಗಿದ್ದ ನೋಂದಣಿ ಮತ್ತು ಮುದ್ರಾಂಕ ಇಲಾಖೆ, ಅಬಕಾರಿ, ಸಾರಿಗೆ ಸೇರಿದಂತೆ ಬಹುತೇಕ ಇಲಾಖೆಗಳು ತಮ್ಮ ಗುರಿ ತಲುಪುವಲ್ಲಿ ವಿಫಲವಾಗಿವೆ. ಹೀಗಾಗಿ ರಾಜ್ಯ ಸರ್ಕಾರ ಆರ್ಥಿಕ ಸಮಸ್ಯೆ ಎದುರಿಸುತ್ತಿದೆ.

ಇಂತಹ ಸ್ಥಿತಿಯಲ್ಲಿ ಕೇಂದ್ರದ ತೆರಿಗೆಯಲ್ಲಿನ ರಾಜ್ಯದ ಪಾಲು ಒಂಬತ್ತು ಸಾವಿರ ಕೋಟಿ ರು.ಗಳಷ್ಟು ಕಡಿಮೆಯಾಗಲಿದೆ ಎಂದು 15ನೇ ಹಣಕಾಸು ಆಯೋಗದ ವರದಿಯಲ್ಲಿ ಸುಳಿವು ನೀಡಲಾಗಿದೆ. ಇದರಿಂದ ಮಾ.5ರಂದು ಬಜೆಟ್ ಮಂಡಿಸುವ ಸಿದ್ಧತೆಯಲ್ಲಿರುವ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರೂ ಆದ ಬಿ.ಎಸ್. ಯಡಿಯೂರಪ್ಪ ಅವರು ಮುಂದೇನು ಮಾಡಬೇಕೆಂದು ಅಧಿಕಾರಿಗಳ ಜೊತೆ ಚರ್ಚಿಸಬೇಕಾಗಿದೆ.

ಹಣಕಾಸು ಇಲಾಖೆ ಮೂಲಗಳ ಪ್ರಕಾರ, ಕೇಂದ್ರದ ಬಜೆಟ್ ಅನ್ವಯ ಸುಮಾರು ಒಂಬತ್ತು ಸಾವಿರ ಕೋಟಿ ರು. ತೆರಿಗೆ ಪಾಲು ಕಡಿಮೆಯಾಗಲಿದೆ. ಮತ್ತೊಂದು ಮೂಲಗಳ ಪ್ರಕಾರ ಸುಮಾರು 11 ಸಾವಿರ ಕೋಟಿ ರು.ಗಳಷ್ಟು ಕೊರತೆ ಉಂಟಾಗಲಿದೆ ಎಂದು ಹೇಳಲಾಗುತ್ತಿದೆ. ಇದರಿಂದ ಉಂಟಾಗುವ ಕೊರತೆಯನ್ನು ಯಾವ ರೀತಿಯಲ್ಲಿ ತುಂಬಬೇಕು ಎಂಬ ಗೊಂದಲ ಸರ್ಕಾರ ಹಾಗೂ ಬಜೆಟ್ ಮಂಡಿಸಲಿರುವ ಮುಖ್ಯಮಂತ್ರಿಗಳ ಮುಂದಿದೆ.

14ನೇ ಹಣಕಾಸು ಆಯೋಗದ ಶಿಫಾರಸು ಅನ್ವಯ ಕೇಂದ್ರ ವಸೂಲಿ ಮಾಡಿರುವ ಶೇ.42ರಷ್ಟು ತೆರಿಗೆಯನ್ನು ರಾಜ್ಯಗಳು ಪಡೆಯಬಹುದು. ಆದರೆ 15ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆಯಲ್ಲಿನ ರಾಜ್ಯದ ಪಾಲನ್ನು ಕಡಿತಗೊಳಿಸಿದೆ. ಹಣಕಾಸು ಇಲಾಖೆ ಮೂಲಗಳ ಪ್ರಕಾರ, ರಾಜ್ಯಕ್ಕೆ ಎಷ್ಟು ಹಣ ಕಡಿಮೆಯಾಗಲಿದೆ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲ. 15ನೇ ಹಣಕಾಸು ಆಯೋಗದ ವರದಿಯು ಇನ್ನೂ ಬಹಿರಂಗವಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದಲ್ಲದೆ ಕೇಂದ್ರ ಸರ್ಕಾರ ಜಿಎಸ್‌ಟಿ ಸಂಗ್ರಹ ಗುರಿ ತಲುಪುವಲ್ಲಿ ವಿಫಲವಾಗಿದೆ. ಹೀಗಾಗಿ ರಾಜ್ಯಕ್ಕೆ ನೀಡಬೇಕಿರುವ ಜಿಎಸ್‌ಟಿ ಪರಿಹಾರ ಮೊತ್ತವೂ ಕಡಿಮೆಯಾಗುವ ಸಾಧ್ಯತೆ ಇದೆ. ಅಲ್ಲದೆ ಕಳೆದ ಎರಡು ಕಂತುಗಳಿಂದ ಜಿಎಸ್‌ಟಿ ಪರಿಹಾರದ ಹಣವನ್ನೂ ಕೇಂದ್ರ ಸರ್ಕಾರ ನೀಡಿಲ್ಲ. ಹೀಗಾಗಿ ಆರ್ಥಿಕವಾಗಿ ರಾಜ್ಯದ ಸಮಸ್ಯೆಗಳು ಮತ್ತಷ್ಟು ಹೆಚ್ಚಾಗಲಿವೆ.

ಕೇಂದ್ರದ ತೆರಿಗೆ ಪಾಲು 9000 ಕೋಟಿ ರು. ಖೋತಾ

ಮೊದಲ ಪುಟದಿಂದ

ಕೇಂದ್ರೀಯ ತೆರಿಗೆಯಲ್ಲಿ ಈ ರಾಜ್ಯಗಳಿಗೆ ಹೊಡೆತ

ರಾಜ್ಯ	14ನೇ ಹಣಕಾಸು ಆಯೋಗ (ಕೇಂದ್ರೀಯ ತೆರಿಗೆಯಲ್ಲಿ % ಪಾಲು)	15ನೇ ಆಯೋಗ (ಕೇಂದ್ರೀಯತೆರಿಗೆಯಲ್ಲಿ % ಪಾಲು)	ತೆರಿಗೆ ಪಾಲಲ್ಲಿ % ಇಳಿಕೆ
ಆಂಧ್ರಪ್ರದೇಶ	4.3	4.11	-4.4
ಅಸ್ಸಾಂ	3.31	3.13	-5.4
ತೆಲಂಗಾಣ	2.44	2.13	-12.7
ಕೇರಳ	2.5	1.94	-22.4
ಕರ್ನಾಟಕ	4.71	3.65	-22.5

ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದ ಅವಧಿಯಲ್ಲಿ ಕೇಂದ್ರೀಯ ತೆರಿಗೆಯಲ್ಲಿ ಶೇ.4.71ರಷ್ಟು ಪಾಲು ದೊರೆತಿತ್ತು. ಇದು 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಶೇ.3.65ಕ್ಕೆ ಇಳಿಯಲಿದೆ. ಅಂದರೆ ಬರುವ ಕೇಂದ್ರೀಯ ತೆರಿಗೆ ಪಾಲಿನಲ್ಲಿ ಶೇ.22.5ರಷ್ಟು ಕುಸಿತವಾಗಲಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಈ ಹಿಂದೆ 14ನೇ ಹಣಕಾಸು ಆಯೋಗ 5 ವರ್ಷದ ಅವಧಿಗೆ, ಕೇಂದ್ರೀಯ ತೆರಿಗೆಯಲ್ಲಿನ ರಾಜ್ಯಗಳ ಪಾಲಿನ ಬಗ್ಗೆ ಶಿಫಾರಸುಗಳನ್ನು ಮಾಡುತ್ತಿತ್ತು. ಆದರೆ ಈಗ 15ನೇ ಹಣಕಾಸು ಆಯೋಗವು 6 ವರ್ಷದ ಅವಧಿಗೆ ತನ್ನ ಶಿಫಾರಸನ್ನು ಸಲ್ಲಿಸಲಿದೆ. ಇದರ ಮೊದಲ ಭಾಗವಾಗಿ 2020-21ನೇ ಸಾಲಿಗೆ (1 ವರ್ಷದ ಅವಧಿಗೆ) ಮಧ್ಯಂತರ ಶಿಫಾರಸನ್ನು ಅದು ಸಲ್ಲಿಸಿದ್ದು, ಶನಿವಾರ ಸಂಸತ್ತಿನಲ್ಲಿ ಮಂಡನೆಯಾಯಿತು. ಸಂಸದ ಎನ್.ಕೆ. ಸಿಂಗ್ ನೇತೃತ್ವದ ಆಯೋಗವು ಅಂತಿಮ ವರದಿಯನ್ನು ವರ್ಷಾಂತ್ಯಕ್ಕೆ ಸಲ್ಲಿಸಲಿದೆ.

ಕರ್ನಾಟಕಕ್ಕೆ ಹೊಡೆತ ಹೇಗೆ?: 2015-16ರಿಂದ 2019-20ನೇ ಸಾಲಿನಲ್ಲಿ 14ನೇ ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ ಕೇಂದ್ರೀಯ ತೆರಿಗೆಯಲ್ಲಿ ರಾಜ್ಯಗಳ ಪಾಲು ಶೇ.42 ಆಗಿತ್ತು. ಹಿಂದಿನ ಶೇ.32ರ ಪಾಲನ್ನು ಅದು ಶೇ.42ಕ್ಕೆ ಹೆಚ್ಚಿಸಿತ್ತು. ಆದರೆ 15ನೇ ಹಣಕಾಸು ಆಯೋಗದ ವರದಿಯಲ್ಲಿ ರಾಜ್ಯಗಳ ಪಾಲನ್ನು ಶೇ.41ಕ್ಕೆ ಇಳಿಸಲಾಗಿದೆ. ಜಮ್ಮು-ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶ ಮಾಡಿರುವುದು ಹಾಗೂ ಜಮ್ಮು-ಕಾಶ್ಮೀರ ವಿಭಜಿಸಿ ಲಡಾಖ್ ಕೇಂದ್ರಾಡಳಿತ ಪ್ರದೇಶ ಸೃಷ್ಟಿಸಿ, ಹೆಚ್ಚು ಪಾಲು ನೀಡಿರುವುದು ಶೇ.1ರಷ್ಟು ಇಳಿಕೆಗೆ ಕಾರಣ.

ಇದೇ ವೇಳೆ, ರಾಜ್ಯಗಳ ತಲಾದಾಯ ಹಾಗೂ ದೇಶದ ತಲಾದಾಯವನ್ನು ತುಲನೆ ಮಾಡಿ ಅದರ ಆಧಾರದಲ್ಲಿಯೂ ಕೇಂದ್ರೀಯ ತೆರಿಗೆಯಲ್ಲಿ ರಾಜ್ಯಗಳಿಗೆ ಎಷ್ಟು ಪಾಲು ನೀಡಬೇಕು ಎಂದು ನಿರ್ಧರಿಸಲಾಗುತ್ತದೆ. ರಾಜ್ಯಗಳ ತಲಾದಾಯ ದೇಶದ ತಲಾದಾಯಕ್ಕಿಂತ ಹೆಚ್ಚಿದ್ದರೆ ಅಂಥ ರಾಜ್ಯಗಳಿಗೆ ಕಡಿಮೆ ತೆರಿಗೆ ಪಾಲನ್ನು ನೀಡಲಾಗುತ್ತದೆ. ರಾಜ್ಯಗಳ ತಲಾದಾಯ ದೇಶದ ತಲಾದಾಯಕ್ಕಿಂತ ಕಮ್ಮಿ ಇದ್ದರೆ ಅಂಥ ರಾಜ್ಯಗಳಿಗೆ ಹೆಚ್ಚು ತೆರಿಗೆ ಪಾಲು ಲಭಿಸುತ್ತದೆ. ಈ ಮಾನದಂಡಕ್ಕೆ ಈವರೆಗೆ ಶೇ.50ರಷ್ಟು ಪ್ರಾಮುಖ್ಯತೆ (ವೆಯ್ಟೇಜ್) ನೀಡಲಾಗುತ್ತಿತ್ತು. ಇದೀಗ ಇದರ ಪ್ರಾಮುಖ್ಯತೆಯನ್ನು ಶೇ.45ಕ್ಕೆ ಇಳಿಸಲಾಗಿದೆ. ಇದರಿಂದಾಗಿಯೂ ಕರ್ನಾಟಕ ಸೇರಿ ದಕ್ಷಿಣ ಭಾರತದ ರಾಜ್ಯಗಳ ತೆರಿಗೆ ಪಾಲಿಗೆ ಹೊಡೆತ ಬೀಳಬಹುದು ಎನ್ನಲಾಗಿದೆ.

ಆದರೆ, 'ಜನಸಂಖ್ಯೆ ಇಳಿಕೆಗೆ ಕ್ರಮ ಜರುಗಿಸಿದ ಕಾರಣ ನಮ್ಮ ತೆರಿಗೆ ಪಾಲಿಗೆ ಹೊಡೆತ ಬಿದ್ದಿದೆ. ಕಮ್ಮಿ ಜನಸಂಖ್ಯೆ ಇರುವ ನಮಗೆ ಕಡಿಮೆ ತೆರಿಗೆ ಪಾಲು ಸಿಗುತ್ತಿದೆ. ಹೆಚ್ಚು ಜನಸಂಖ್ಯೆ ಇರುವ ಉತ್ತರ ಭಾರತದ ರಾಜ್ಯಗಳಿಗೆ ಹೆಚ್ಚು ತೆರಿಗೆ ಪಾಲು ಲಭಿಸುತ್ತಿದೆ' ಎಂದು ಕರ್ನಾಟಕದ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಇತರ ದಕ್ಷಿಣ ಭಾರತದ ಮುಖ್ಯಮಂತ್ರಿಗಳು ಈ ಹಿಂದೆ ಆರೋಪಿಸಿದ್ದರು. ದಕ್ಷಿಣ ಭಾರತದ ರಾಜ್ಯಗಳ ಈ ಅಳಲಿಗೆ 15ನೇ ಹಣಕಾಸು ಆಯೋಗ ಓಗೊಟ್ಟಿದೆ. ಜನಸಂಖ್ಯೆ ಆಧರಿಸಿ ತೆರಿಗೆ ಪಾಲು ಹಂಚುವುದರ ಪ್ರಾಮುಖ್ಯತೆಯನ್ನು ಶೇ.27.5ರಿಂದ ಶೇ.15ಕ್ಕೆ ಇಳಿಸಿದೆ. ಅರಣ್ಯ ಹಾಗೂ ಪರಿಸರದ ಮೇಲಿನ ಮಾನದಂಡವನ್ನು ಶೇ.7.5ರಿಂದ ಶೇ.10ಕ್ಕೆ ಹೆಚ್ಚಿಸಿದೆ.

6ಕ್ಕೆ ಸಂಪುಟ ಮುಹೂರ್ತ

ಮೊದಲ ಪುಟದಿಂದ

ಈ ಮಾಹಿತಿ ಸಿಕ್ಕಿರುವುದರಿಂದಲೇ ಕುಮಟಳ್ಳಿ ಅವರು ಮುಖ್ಯಮಂತ್ರಿಗಳ ವಿರುದ್ಧ ಅಸಮಾಧಾನ ಹೊರಹಾಕಿದ್ದಾರೆ. ಒಂದೇ ಮತ ಕ್ಷೇತ್ರದ ಇಬ್ಬರಿಗೆ (ಲಕ್ಷ್ಮಣ ಸವದಿ) ಮಂತ್ರಿ ಸ್ಥಾನ ನೀಡುವುದಕ್ಕೆ ಸಾಧ್ಯವಿಲ್ಲ ಎನ್ನುವುದಾದರೆ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಕ್ಕೂ ಮುನ್ನ ಈ ವಿಷಯ ನನಗೆ ತಿಳಿಸಬೇಕಾಗಿತ್ತು. ನಮ್ಮ ಪರಿಸ್ಥಿತಿ ಇದೀಗ ಹುಲಿ ಬಾಯಿಗೆ ತಲೆ ಕೊಟ್ಟಂತೆ ಆಗಿದೆ. ಕೊಟ್ಟ ಮಾತಿನಂತೆ ನಡೆದುಕೊಳ್ಳದಿದ್ದರೆ ಇಡೀ ಪಕ್ಷಕ್ಕೆ ಕೆಟ್ಟ ಹೆಸರು ಬರಲಿದೆ. ಭವಿಷ್ಯದಲ್ಲಿ ಬಿಜೆಪಿ ಪಕ್ಷಕ್ಕೆ ಬರುವವರು ಯೋಚನೆ ಮಾಡುವಂತಾಗುತ್ತದೆ ಎಂದು ಕುಮಟಳ್ಳಿ ಅವರು ತೀಕ್ಷ್ಣವಾಗಿ ಹೇಳಿರುವುದು ಮುಖ್ಯಮಂತ್ರಿಗಳಿಗೆ ಮತ್ತು ಬಿಜೆಪಿಗೆ ಆಘಾತವಾಗಿದೆ. ಇನ್ನೂ ನಾಲ್ಕು ದಿನ ಬಾಕಿ ಇರುವುದರಿಂದ ಅಷ್ಟರೊಳಗಾಗಿ ನಿರ್ಧಾರ ಬದಲಾವಣೆಯಾದಲ್ಲಿ ಮಾತ್ರ ಮಹೇಶ್ ಕುಮಟಳ್ಳಿ ಅವರಿಗೆ ಸಚಿವ ಸ್ಥಾನ ಸಿಗಬಹುದು. ಆದರೆ, ಆ ಸಾಧ್ಯತೆ ತೀರಾ ಕಡಮೆ ಎನ್ನಲಾಗುತ್ತಿದೆ.

ಕತ್ತಿ, ಲಿಂಬಾವಳಿ, ಯೋಗೇಶ್ವರ್‌ಗೆ ಸಚಿವ ಪಟ್ಟ ಸಾಧ್ಯತೆ: ಇದೇ ವೇಳೆ ಪಕ್ಷದ ಮೂಲ ಶಾಸಕರ ಪೈಕಿ ಉಮೇಶ್ ಕತ್ತಿ ಹಾಗೂ ಅರವಿಂದ್ ಲಿಂಬಾವಳಿ ಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಸಿಗುವ ಸಂಭವವಿದೆ. ಅಲ್ಲದೆ, ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದವರ ಪೈಕಿ ಒಬ್ಬರಾಗಿರುವ ಮಾಜಿ ಶಾಸಕ ಸಿ.ಪಿ.ಯೋಗೇಶ್ವರ ಅವರಿಗೂ ಸಚಿವ ಸ್ಥಾನ ಒಲಿದು ಬರುವ ಸಾಧ್ಯತೆ ಹೆಚ್ಚಿದೆ. ಆದರೆ, ಈ ಮೂವರಲ್ಲಿ ಅನಿರೀಕ್ಷಿತವಾಗಿ ಯಾವುದಾದರೊಂದು ಹೆಸರು ಕೈಬಿಟ್ಟು ಅಚ್ಚರಿಯ ಹೆಸರು ತೇಲಿಬಂದರೂ ಅಚ್ಚರಿಯಿಲ್ಲ ಎಂಬ ಮಾತೂ ಕೇಳಿಬಂದಿದೆ.

ಈಗ ವಿಧಾನಮಂಡಲದ ಯಾವುದೇ ಸದನದ ಸದಸ್ಯರೂ ಅಲ್ಲದ ಯೋಗೇಶ್ವರ್ ಅವರನ್ನು ಬರುವ ಜೂನ್‌ನಲ್ಲಿ ವಿಧಾನಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲಾಗುತ್ತದೆ. ಸಚಿವರಾದ ಮೇಲೆ ಆರು ತಿಂಗಳ ಅವಧಿಯಿರುವುದರಿಂದ ಸದ್ಯ ಯಾವುದೇ ಸಮಸ್ಯೆ ಎದುರಾಗುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ನಗರಾಭಿವೃದ್ಧಿ ಖಾತೆಗೆ ಬೈರತಿ ಒಲವು?

ಬೆಂಗಳೂರು: ಬೆಂಗಳೂರು ನಗರಾಭಿವೃದ್ಧಿ ಅಥವಾ ಯಾವ ಖಾತೆ ಸಿಗುತ್ತದೆಯೋ ಕಾದು ನೋಡೋಣ. ಯಾವುದೇ ಖಾತೆ ನೀಡಿದರೂ ಜವಾಬ್ದಾರಿಯುತವಾಗಿ ನಿರ್ವಹಿಸುತ್ತೇನೆ ಎಂದು ಶಾಸಕ ಬೈರತಿ ಬಸವರಾಜ ಹೇಳಿದ್ದಾರೆ. ಭಾನುವಾರ ನಗರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಯಾರಿಗೆ ಯಾವ ಖಾತೆ ಹಂಚಿಕೆ ಮಾಡುತ್ತಾರೆ ಎಂಬುದು ಮುಖ್ಯಮಂತ್ರಿಗೆ ಬಿಟ್ಟ ವಿಚಾರ ಎಂದರು. ಸಂಪುಟ ಪಟ್ಟಿಯಲ್ಲಿನ ಹತ್ತು ಶಾಸಕರ ಹೊರತಾಗಿ ಉಳಿದವರನ್ನು ಮುಖ್ಯಮಂತ್ರಿಗಳು ಕೈ ಬಿಡುವುದಿಲ್ಲ. ಮುಂದಿನ ದಿನಗಳಲ್ಲಿ ಅವರಿಗೂ ಸರ್ಕಾರದಲ್ಲಿ ಅವಕಾಶ ನೀಡಲಿದ್ದಾರೆ. ಈಗಾಗಲೇ ಯಡಿಯೂರಪ್ಪ ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ. ಮುಂದಿನ ದಿನಗಳಲ್ಲಿ ಅದೇ ರೀತಿ ನಡೆದುಕೊಳ್ಳುತ್ತಾರೆ. ಆದರೆ ಶಾಸಕರು ತಾಳ್ಮೆ ಕಾಯ್ದುಕೊಳ್ಳಬೇಕು ಎಂದು ಹೇಳಿದರು.

ವಿಶ್ವನಾಥ್, ಎಂಟಿಬಿಗೆ ಸ್ಥಾನ ಇಲ್ಲ

ಮೊದಲ ಪುಟದಿಂದ

ಈ ಪೈಕಿ ವಿಶ್ವನಾಥ್ ಅವರಂತೂ ತೀವ್ರ ವಾಗ್ದಾಳಿಯನ್ನೂ ನಡೆಸಿದ್ದರು. ಇದೀಗ ಮುಖ್ಯಮಂತ್ರಿಗಳ ಪುನರುಚ್ಚಾರದ ನಂತರ ಮುಂದೇನು ಮಾಡುತ್ತಾರೆ ಎಂಬುದು ಕುತೂಹಲಕರವಾಗಿದೆ. ಇದೇ ವೇಳೆ ಭಾನುವಾರ ಯಡಿಯೂರಪ್ಪ ಅವರನ್ನು ಭೇಟಿ ಮಾಡಿದ್ದ ಎಂ.ಟಿ.ಬಿ.ನಾಗರಾಜ್ ಅವರು ತಮಗೆ ಅಸಮಾಧಾನವಿಲ್ಲ ಎಂದು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ನೋಡಿಕೊಂಡು ಎಲ್ಲವನ್ನೂ ಸರಿಪಡಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ವಿಶ್ವನಾಥ್ ಅವರು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಂದ ಅಂತರ ಕಾಪಾಡಿಕೊಂಡಿದ್ದಾರೆ. ಮೈಸೂರಿನಿಂದಲೇ ತಮ್ಮ ಆಕ್ರೋಶ ಹೊರಹಾಕುತ್ತಿರುವ ಅವರು ಯಡಿಯೂರಪ್ಪ ಅವರನ್ನು ಸದ್ಯಕ್ಕೆ ಭೇಟಿ ಮಾಡುವುದಿಲ್ಲ ಎಂದೂ ಹೇಳಿದ್ದಾರೆ.

ಭಾವಿ ಸಚಿವರಿಂದ ಖಾತೆಗೆ ಪಟ್ಟು

ಮೊದಲ ಪುಟದಿಂದ

ಜತೆಗೆ ತಮ್ಮ ಬೆಂಬಲಿಗ ಶಾಸಕರಾಗಿರುವ ಮಹೇಶ್ ಕುಮಟಳ್ಳಿ ಅವರು ಸಚಿವ ಸ್ಥಾನದಿಂದ ವಂಚಿತಗೊಳ್ಳುತ್ತಿರುವುದರಿಂದ ತಾವು ಹೇಳಿದ ಖಾತೆಯನ್ನೇ ನೀಡಬೇಕು ಎಂಬ ಪಟ್ಟು ಹಿಡಿದಿದ್ದಾರೆ ಎನ್ನಲಾಗಿದೆ.

ಇನ್ನು ಹಿರೇಕೆರೂರು ಕ್ಷೇತ್ರದ ಬಿ.ಸಿ.ಪಾಟೀಲ್ ಅವರು ಗೃಹ ಖಾತೆ ನೀಡುವಂತೆ ಮನವಿ ಮಾಡಿದ್ದಾರೆ ಎಂಬ ಮಾಹಿತಿ ಹೊರಬಿದ್ದಿದೆ. ಹಿಂದೆ ಪೊಲೀಸ್ ಅಧಿಕಾರಿಯಾಗಿದ್ದ ಪಾಟೀಲ್ ಅವರಿಗೆ ಗೃಹ ಸಚಿವರಾಗುವ ಬಯಕೆಯಿದೆಯಂತೆ. ಆದರೆ, ತಮ್ಮ ಆಪ್ತರಾಗಿರುವ ಹಾಲಿ ಗೃಹ ಖಾತೆ ಹೊಂದಿರುವ ಬಸವರಾಜ ಬೊಮ್ಮಾಯಿ ಅವರಿಂದ ಅದನ್ನು ವಾಪಸ್ ಪಡೆಯಲು ಮುಖ್ಯಮಂತ್ರಿಗಳು ಒಪ್ಪುತ್ತಾರಾ ಎಂಬುದು ಕುತೂಹಲಕರವಾಗಿದೆ.

ಇದೇ ವೇಳೆ ಚಿಕ್ಕಬಳ್ಳಾಪುರದ ಡಾ.ಕೆ. ಸುಧಾಕರ್ ವೈದ್ಯರಾಗಿರುವುದರಿಂದ ಹಾಲಿ ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಅವರ ಬಳಿಯಿರುವ ವೈದ್ಯ ಶಿಕ್ಷಣ ಖಾತೆ ನೀಡಬಹುದು ಎನ್ನಲಾಗುತ್ತಿದೆ. ಆದರೆ, ಅವರು ವೈದ್ಯ ಶಿಕ್ಷಣದ ಬದಲು ಪ್ರಮುಖ ಖಾತೆಗಳಲ್ಲಿ ಒಂದಾಗಿರುವ ಇಂಧನ ಇಲಾಖೆ ಮೇಲೆ ದೃಷ್ಟಿ ಹಾಯಿಸಿರುವುದರಿಂದ ಕಾದು ನೋಡಬೇಕು. ಅದೇ ರೀತಿ ಕೆ.ಆರ್.ಪುರ ಕ್ಷೇತ್ರದ ಬೈರತಿ ಬಸವರಾಜು ಅವರು ತಾವು ಉಪಚುನಾವಣೆಯಲ್ಲಿ ಗೆದ್ದಾಗಿನಿಂದಲೂ ನಗರಾಭಿವೃದ್ಧಿ ಖಾತೆಯನ್ನೇ ಕನವರಿಸುತ್ತಿದ್ದಾರೆ. ಹಲವು ಬಾರಿ ಬಹಿರಂಗವಾಗಿಯೂ ಹೇಳಿಕೆ ನೀಡಿದ್ದಾರೆ.

ಬೆಂಗಳೂರು ಖಾತೆಗೆ ಸೋಮಶೇಖರ್ ಪಟ್ಟು

ಇದೆಲ್ಲಕ್ಕಿಂತ ಭಿನ್ನವಾಗಿ ಯಶವಂತಪುರ ಕ್ಷೇತ್ರದ ಎಸ್.ಟಿ.ಸೋಮಶೇಖರ್ ಅವರು ಬೆಂಗಳೂರು ನಗರ ಅಭಿವೃದ್ಧಿ ಖಾತೆಯ ಮೇಲೆ ಕಣ್ಣಿಟ್ಟಿರುವುದು ಆಡಳಿತಾರೂಢ ಬಿಜೆಪಿಯ ರಾಜಧಾನಿ ಮುಖಂಡರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಕಂದಾಯ ಸಚಿವ ಆರ್. ಅಶೋಕ್ ಮತ್ತು ಉಪಮುಖ್ಯಮಂತ್ರಿ ಅಶ್ವತ್ಥನಾರಾಯಣ ಅವರಿಬ್ಬರೂ ಈ ಖಾತೆಯನ್ನು ಬಯಸಿದ್ದರು. ಇದಕ್ಕಾಗಿ ಮುಖ್ಯಮಂತ್ರಿ ಯಡಿಯೂರಪ್ಪ ಬಳಿ ಲಾಬಿಯನ್ನೂ ನಡೆಸಿದ್ದರು. ಆದರೆ, ಇಬ್ಬರ ಪೈಕಿ ಒಬ್ಬರಿಗೆ ಕೊಟ್ಟರೂ ಮತ್ತೊಬ್ಬರು ಮುನಿಸಿಕೊಳ್ಳಬಹುದು ಎಂಬ ಕಾರಣಕ್ಕಾಗಿ ಅಂತಿಮವಾಗಿ ಮುಖ್ಯಮಂತ್ರಿಗಳು ತಮ್ಮ ಬಳಿಯೇ ಆ ಖಾತೆಯನ್ನು ಇರಿಸಿಕೊಳ್ಳುವ ನಿರ್ಧಾರ ಕೈಗೊಂಡರು. ಇದೀಗ ಸೋಮಶೇಖರ್ ಅವರು ಅದೇ ಖಾತೆ ನೀಡುವಂತೆ ಬೇಡಿಕೆ ಇಟ್ಟಿರುವುದರಿಂದ ಮುಖ್ಯಮಂತ್ರಿಗಳು ಯಾವ ನಿರ್ಧಾರ ಕೈಗೊಳ್ಳುವರು ಎಂಬುದು ಕುತೂಹಲವಾಗಿದೆ.

ಯಾವ ಖಾತೆಗೆ ಪಟ್ಟು?:

- ಸೋಮಶೇಖರ್-ಬೆಂಗಳೂರು ನಗರಾಭಿವೃದ್ಧಿ
- ಬೈರತಿ ಬಸವರಾಜು-ನಗರಾಭಿವೃದ್ಧಿ
- ಸುಧಾಕರ್-ಇಂಧನ/ ವೈದ್ಯಕೀಯ
- ರಮೇಶ್ ಜಾರಕಿಹೊಳಿ-ಜಲಸಂಪನ್ಮೂಲ
- ಬಿ.ಸಿ.ಪಾಟೀಲ್-ಗೃಹ ಖಾತೆ

PUBLIC NOTICE

My clients Panchmi Concrete, A registered Partnership Firm, No.103/04, Huttanahalli, Razakpalya Road, Chikkajala Post, Bengaluru North, Bengaluru-562157 Represented by Managing partner Sri.Srinivas.B.N have entered into a registered sale agreement with M/S.Maniveera Structure Private Ltd. A company incorporated under The Indian Companies Act,2013 for purchase of the schedule described property. If anybody has got any claim, right or interest in the schedule property they are called upon to submit their objections along with the supportive documents to the undersigned within 15 days from the date of publication of this notice. In the event of the undersigned not receiving any objections within the stipulated time as stated herein above the sale transactions in respect of the schedule property would be completed by my clients presuming that their vendors have a clear and marketable tittle over schedule property.

SCHEDULE PROPERTY

All the piece and parcel of the immoveable property survey No.90 measuring 6 acres 14 Guntas excluding 7 Guntas of 'B' Karab, situated at Hagganahalli village, Kundana Hobli, Devanahalli Taluk, Bengaluru Rural District in the project know as "RAIN FOREST PHASE-I" bearing the vacant Plot/site bearing No-100,101,102,103,104 measuring area of 7875 Sq Feet (731.60Sqmt), East to west 175.00 Ft and North to South 45.00 Ft, and Bounded as follows:

Plot No	East	West	North	South
Plot No.100	Plot No.99	Plot No.101	Road	Plot No. 118 &119
Plot No.101	Plot No.100	Plot No.102	Road	Plot No. 117 & 118
Plot No.102	Plot No.101	Plot No.103	Road	Plot No. 116 & 117
Plot No.103	Plot No.102	Plot No.104	Road	Plot No. 115 & 116
Plot No.104	Plot No.103	Plot No.105	Road	Plot No. 114 & 115

KIRAN .R, Advocate
No.27, Chandrashekara Complex, 1st Floor,
1st Main Road, Gandhinagar, Bengaluru-9.

BANGALORE
DATE: 03.02.2020

ಹಾಸನ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಹಾಸನ.
ಕೈಗಾರಿಕಾ ಕ್ಷೇತ್ರ, ಅಂಚೆ ಪೆಟ್ಟಿಗೆ ಸಂಖ್ಯೆ -120, ಬಿ.ಎಂ.ರಸ್ತೆ, ಹಾಸನ- 573201.
Ph NO : 08172-240631 FAX: 08172-240640
E-mail Address: hamul77@yahoo.co.in

ಸಂಖ್ಯೆ: ಹಾ.ಸ.ಹಾ.ಒ.ನಿ./ಶೇ.ಹಾಂ/ಎಎಂಸಿಯು/ ಇ-ಪ್ರೊ/6734/2019-20 ದಿನಾಂಕ: 01/02/2020

ಇ-ಟೆಂಡರ್ ಪ್ರಕಟಣೆ - ತಾಂತ್ರಿಕ ಹಾಗು ವಾಣಿಜ್ಯ ಅಲ್ಪಾವಧಿ ಟೆಂಡರ್

ಹಾಸನ ಸಹಕಾರಿ ಹಾಲು ಒಕ್ಕೂಟಕ್ಕೆ ಅವಶ್ಯಕತೆಯಿರುವ (1) AMCU ಗಳ ದ್ವೈ-ವಾರ್ಷಿಕ (Bi-annual) ನಿರ್ವಹಣಾ ಸೇವಾ ಗುತ್ತಿಗೆಯನ್ನು ಪೂರೈಸಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಇ-ಟೆಂಡರ್ ಅನ್ನು ಆಹ್ವಾನಿಸಲಾಗಿದೆ. (2) ಪರಿಮಾಣ ಮತ್ತು ಇಎಂಡಿ ಮೊತ್ತ ಇ-ಟೆಂಡರ್ ಪ್ರಕಟಣೆಯಲ್ಲಿ ಲಭ್ಯವಿರುತ್ತದೆ. (3) ಇ-ಟೆಂಡರ್ ಸಲ್ಲಿಸುವ/ಸಮಾಪಿಸುವ ಕೊನೆಯ ದಿನಾಂಕ/ಸಮಯ: 26.02.2020 ಸಂಜೆ 1.00 ಘಂಟೆಯವರೆಗೆ, (4) ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ/ಸಮಯ : 28.02.2020 ಅಪರಾಹ್ನ 3.00 ಘಂಟೆಯವರೆಗೆ, (5) ಯಾವುದೇ ಸ್ಪಷ್ಟೀಕರಣಕ್ಕೆ ಹಾಗೂ ಮಾಹಿತಿ ಬೇಕಾದಲ್ಲಿ ಸಂಪರ್ಕಿಸಬೇಕಾದ ವಿಳಾಸ : ವ್ಯವಸ್ಥಾಪಕರು (ಶೇ.ಹಾಂ) ಅಧಿಕಾರಿಯನ್ನು ಈ ಮೇಲ್ಕಂಡ ವಿಳಾಸದಲ್ಲಿ ಸಂಪರ್ಕಿಸುವುದು. (6) ಟೆಂಡರ್ ಸಂಬಂಧಿಸಿದ ಇತರೆ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.in/. ನಲ್ಲಿ ಲಭ್ಯವಿದ್ದು ಡೌನ್‌ಲೋಡ್ ಮಾಡಿಕೊಳ್ಳುವುದು.

Sd/- ವ್ಯವಸ್ಥಾಪಕ ನಿರ್ದೇಶಕರು

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ನೋಂದಾಯಿತ ಕಛೇರಿ: ನಂ. 148, ನೆಲಮಹಡಿ, ಎಂಬೆಸ್ಸಿ ಸ್ಕ್ವೇರ್, ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು 560001 ಫೋನ್: 080-22256688/22289966, ಫ್ಯಾಕ್ಸ್ ನಂ. 080-22264477
CIN No: U41000KA2016SGC097260, Website: www.vjnl.in, E-mail: techvjnl@gmail.com

ಮೂರನೇ ಪಕ್ಷದ ಗುಣ ನಿಯಂತ್ರಣ ತಪಾಸಣಾ ಸಮಾಲೋಚಕರ ಸಂಸ್ಥೆಗಳ ನೋಂದಣಿಗಾಗಿ ಅರ್ಜಿ ಆಹ್ವಾನ.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರು ನಿಗಮದಡಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳ ಕಾಮಗಾರಿಗಳ "ಗುಣಮಟ್ಟದ ಭರವಸೆ / ಗುಣಮಟ್ಟದ ಮೇಲ್ವಿಚಾರಣೆ / ಗುಣಮಟ್ಟದ ನಿಯಂತ್ರಣ" ಸೇವೆಗಳನ್ನು ಕೈಗೊಳ್ಳಲು ಅರ್ಹ ಮೂರನೇ ಪಕ್ಷದ ಸಮಾಲೋಚಕರ ನೋಂದಣಿಗಾಗಿ 2019-24ರ ಬ್ಲಾಕ್ ಅವಧಿಗೆ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

ಸದರಿ ಎಂಪ್ಯಾನೆಲ್‌ಮೆಂಟ್‌ಗೆ ಸಂಬಂಧಿಸಿದಂತೆ ಅರ್ಜಿ ನಮೂನೆ, ಅರ್ಹತಾ ಮಾನದಂಡ ಹಾಗೂ ಅಗತ್ಯವಿರುವ ದಾಖಲೆಗಳನ್ನು ನಿಗಮದ ನೋಂದಾಯಿತ ಕಛೇರಿಯಿಂದ ಕೆಲಸದ ಸಮಯದಲ್ಲಿ ಮರು ಪಾವತಿಸಲಾಗದ ಮೊತ್ತವಾದ ರೂ. 500/- + ಜಿಎಸ್‌ಟಿ @ 12%, ಒಟ್ಟು ರೂ. 560/- (ರೂ. ಐನೂರ ಅರವತ್ತು ಮಾತ್ರ)ಗಳನ್ನು ಪಾವತಿಸಿ ಪಡೆಯಬಹುದಾಗಿದೆ. ಅರ್ಜಿ ನಮೂನೆಗಾಗಿ ಸದರಿ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು. ರವರ ಹೆಸರಿನಲ್ಲಿ ಯಾವುದೇ ಷೆಡ್ಯೂಲ್ಡ್ ಬ್ಯಾಂಕಿನಲ್ಲಿ ಪಡೆದ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಬಹುದು. ಖಾಲಿ ಅರ್ಜಿ ನಮೂನೆಗಳನ್ನು ಬೆಂಗಳೂರು ನಿಗಮದ ನೋಂದಾಯಿತ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ. ಅರ್ಜಿ ನಮೂನೆಗಳನ್ನು ಅಂಚೆ ಮೂಲಕ ಕಳುಹಿಸಲಾಗುವುದಿಲ್ಲ.

ಮೂರನೇ ಪಕ್ಷದ ಸಮಾಲೋಚಕರ ಎಂಪ್ಯಾನಲ್‌ಮೆಂಟ್‌ನ ಅರ್ಹತೆಯನ್ನು ನಿರ್ಧರಿಸುವಲ್ಲಿ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ರವರ ನಿರ್ಣಯ ಅಂತಿಮವಾಗಿರುತ್ತದೆ.

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು

DIPR/DDU/R.O:2275/2019-20

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಕಾರ್ಯನಿರ್ವಾಹಕ ಅಭಿಯಂತರರ ಕಚೇರಿ, ತ್ಯಾನೀನಿ (ಚೆಲ್ಲಘಟ್ಟ ವ್ಯಾಲಿ) ವಿಭಾಗ,
ಓಎಮ್‌ಬಿಆರ್ ಜಿಎಲ್‌ಆರ್, 3ನೇ ಮುಖ್ಯರಸ್ತೆ, ಓಎಮ್‌ಬಿಆರ್ ಬಡಾವಣೆ,
ಬಾಣಸವಾಡಿ, ಬೆಂಗಳೂರು – 560043.

ಸಂಖ್ಯೆ: ಬೆಂಜಮಂ/ಕಾನಿಅ(ತ್ಯಾನೀನಿ)-(ಸಿವಿ)/ಓಬಿ/57/2019-20 ದಿ: 01.02.2020

ಟೆಂಡರ್ ಆಹ್ವಾನ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರಿಂದ ವಿಜ್ಞಾನನಗರ, ಬೃಂದಾವನ ಬಡಾವಣೆಯಲ್ಲಿ 5ನೇ ಅಡ್ಡರಸ್ತೆಯಿಂದ ದೊಡ್ಡನೆಕ್ಕುಂದಿ ಕೆರೆಯ ಮಾರ್ಗವಾಗಿ 230/300 ಮಿಮೀ ವ್ಯಾಸದ ಒಳಚರಂಡಿ ಮಾರ್ಗದ ಬದಲಾಗಿ 450 ಮಿಮೀ ವ್ಯಾಸದ ಆರ್‌ಸಿಸಿ ಎನ್‌ಪಿ-3 ದರ್ಜೆಯ ಒಳಚರಂಡಿ ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರಿಗಿಟ್ಟ ಮೊತ್ತ: ₹ 30.22 ಲಕ್ಷಗಳು, ಇಎಂಡಿ ಮೊತ್ತ: ₹ 61,000/-

ಭರ್ತಿ ಮಾಡಿದ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 09.02.2020ರ ಸಂಜೆ 4:00 ಗಂಟೆಯವರೆಗೆ. ಬಿಡ್‌ಗಳನ್ನು ತೆರೆಯುವ ದಿನಾಂಕ: 10.02.2020ರ ಸಂಜೆ 4:10 ಗಂಟೆಗೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ https://eproc.karnataka.gov.in ಇಲ್ಲಿಗೆ ಲಾಗ್‌ಆನ್ ಆಗಿ ಪಡೆಯಬಹುದು.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ-ಸಿವಿ)

CLASSIFIEDS
FOR BOOKING: 080-68416354
9008255402 9611280123

CAUTION ಕನ್ನಡಪ್ರಭ
Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the Advertisers. The Printer, Publisher, Editor and Owner of Kannada Prabha Publications Ltd., shall not be held responsible /liable for any consequences, in case such claims are found to be false.

Can Fin Homes Ltd
(Sponsor : CANARA BANK)
HOME LOANS + DEPOSITS
Translating Dreams into Reality

ಕ್ಯಾನ್ ಫಿನ್ ಹೋಮ್ಸ್ ಲಿ.
ನೋಂ.ಕಛೇರಿ, ನಂ.29/1,
ಸರ್ ಎಮ್.ಎನ್. ಕೃಷ್ಣರಾವ್ ರಸ್ತೆ,
ಬಸವನಗುಡಿ, ಬೆಂಗಳೂರು 560 004.
ಫೋನ್: 080-26565739, 26567655
ಫ್ಯಾಕ್ಸ್: 080-26565746
E-mail : development@canfinhomes.com
Website: www.canfinhomes.com
CIN: L85110KA1987PLC008699

ದಿನಾಂಕ 03/02/2020ರಿಂದ ಅನ್ವಯವಾಗುವ ಸಾರ್ವಜನಿಕ ಠೇವಣಿಗಳ ಮೇಲಿನ ಬಡ್ಡಿ ದರಗಳು

ಐಸಿಆರ್‌ಎ ಲಿ. ಇವರಿಂದ ಠೇವಣಿ ಯೋಜನೆಗಳಿಗೆ ಎಂಎಎಎ ಸ್ಥಿರ ದೃಷ್ಟಿಕೋನ ನೀಡಲ್ಪಟ್ಟಿದೆ

ನಿಶ್ಚಿತ ಠೇವಣಿ* / ಸಂಚಿತ ಠೇವಣಿ**

ಠೇವಣಿ ಅವಧಿ ತಿಂಗಳುಗಳಲ್ಲಿ	ಠೇವಣಿಗಳು ರೂ.1 ಕೋಟಿವರೆಗೆ		ದೊಡ್ಡ ಪ್ರಮಾಣದ ಠೇವಣಿ: > ರೂ.1 ಕೋಟಿ
	ಸಾಮಾನ್ಯರ ಬಡ್ಡಿ ದರ	ಹಿರಿಯ ನಾಗರಿಕರ ಬಡ್ಡಿ ದರ	
12	6.75%	7.25%	6.75%
13-36	7.00%	7.50%	7.00%
37-48	7.00%	7.50%	7.00%
48-60	7.00%	7.50%	7.00%

*ಠೇವಣಿಗಳ ಮೇಲೆ ಬಡ್ಡಿಯನ್ನು ಮಾಸಿಕ/ತ್ರೈಮಾಸಿಕ/ಅರ್ಧವಾರ್ಷಿಕ/ವಾರ್ಷಿಕವಾಗಿ ಪಾವತಿ ಮಾಡಲಾಗುವುದು.
(ಕನಿಷ್ಠ ಠೇವಣಿ ಮೊತ್ತ: ರೂ. 2,00,000/-) ಕನಿಷ್ಠ ಠೇವಣಿ ಅವಧಿ: 12 ತಿಂಗಳು
**ಬಡ್ಡಿಯನ್ನು ತ್ರೈಮಾಸಿಕ ಆಧಾರದ ಮೇಲೆ ಸಂಯೋಜಿಸಲಾಗುವುದು.
(ಕನಿಷ್ಠ ಠೇವಣಿ ಮೊತ್ತ: ರೂ. 20,000/-) ಕನಿಷ್ಠ ಠೇವಣಿ ಅವಧಿ: 12 ತಿಂಗಳು

ಈ ಸಂಕ್ಷಿಪ್ತ ಜಾಹೀರಾತು ಕಂಪನಿಯು ದಿನಾಂಕ: 18/07/2019ರಂದು ಫೈನಾನ್ಶಿಯಲ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭ ಪತ್ರಿಕೆಗಳಲ್ಲಿ ಪ್ರಕಟಿಸಿದ ಜಾಹೀರಾತು ಠೇವಣಿ ಜಾಹೀರಾತಿನ ಮುಂದಿನ ಭಾಗವಾಗಿರುತ್ತದೆ ಹಾಗೂ ಜಾಹೀರಾತಿನಲ್ಲಿ ತಿಳಿಸಲಾದಂತೆ ನಿಯಮ ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

JOB
RECRUITMENT

ನರ್ಸಿಂಗ್ ತರಬೇತಿ

ಉದ್ಯೋಗವಕಾಶ : ಸಂಸ್ಥೆಯಿಂದ ಸೇವಾ ಮನೋಭಾವದೊಂದಿಗೆ ಉಚಿತ ಹೋಂ ನರ್ಸಿಂಗ್ ತರಬೇತಿಯನ್ನು ಆಸ್ಪತ್ರೆಯ ಮುಖಾಂತರ ಪುರುಷ / ಮಹಿಳೆಯರಿಗೆ ಕೊಡಲಾಗುವುದು. ತರಬೇತಿಯಲ್ಲಿ ಊಟ, ಹಾಸ್ಟೆಲ್ ಸಮವಸ್ತ್ರ ಉಚಿತ. ಮಹಿಳೆಯರಿಗೆ ಪ್ರತ್ಯೇಕ ಹಾಸ್ಟೆಲ್, ಪ್ರಾರಂಭದಲ್ಲಿ ಗೌರವ ಸಂಬಲ 10,000 ದಿಂದ 15,000 ತನಕ ಹಾಗೂ ಅನುಭವವುಳ್ಳ ನರ್ಸ್, ಹೋಂ ನರ್ಸ್‌ಗಳಿಗೆ ಉತ್ತಮ ಸಂಬಳವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ. ದಾಸ್ ಸೇವಾ ಸಂಸ್ಥೆ (ಸರಕಾರಿ ನೊಂದಾಯಿತ ಸಂಸ್ಥೆ) ಮಂಗಳೂರು-9343568915, 9845495055, ಬೆಂಗಳೂರು 9242730143, ಮೈಸೂರು 9243306815, ಹುಬ್ಬಳ್ಳಿ 9242302918, ಬೆಳಗಾವಿ - 9242096219, ಹಾಸನ- 9241324003, ಶಿವಮೊಗ್ಗ 9241127545, ದಾವಣಗೆರೆ 7760164111, ಬಳ್ಳಾರಿ - 9972851518.
FW-35358

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಲಬುರಗಿ

ಸಂ.ಕಾನಿಅ/ಪಂರಾಇಂ/ವಿಕ/ಶಾಖಾ6/ಟೆಂಡರ/2019-20/4931 ದಿನಾಂಕ: 31/01/2020

ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ - 2ನೇ ಕರೆ

ದ್ವಿ-ಲಕೋಟೆ ಪದ್ಧತಿಯಲ್ಲಿ

1) ಕಾಮಗಾರಿ ವಿವರ : ಕಲಬುರಗಿ ತಾಲೂಕಿನ ಕುರಿಕೋಟಾ ಗ್ರಾಮದ ವಿವಿಧ ಬಡಾವಣೆಗಳಲ್ಲಿ ಸಿ.ಸಿ. ರಸ್ತೆ, ಚರಂಡಿ ಕಟ್ಟಡ, ಸರ್ಕಾರಿ ಶಾಲಾ ಆವರಣದಲ್ಲಿ ಆಟದ ಮೈದಾನ ಹಾಗೂ ಇತರೆ ಕಾಮಗಾರಿಯ ಇಂಡೆಂಟ ಸಂಖ್ಯೆ : 72996/ 2ನೇ ಕರೆ, 2) ಲೆಕ್ಕ ಶೀರ್ಷಿಕೆ : 2017-18ನೇ ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ, 3) ಟೆಂಡರಿಗಿಟ್ಟ ಅಂದಾಜು ಮೊತ್ತ : 80,49,452.24, 4) ಗುತ್ತಿಗೆದಾರರ ಅರ್ಹತೆ : 1ನೇ ದರ್ಜೆ & ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ : 31-01-2020 ರಿಂದ 13-02-2020 ಸಾಯಂಕಾಲ 4:00 ಗಂಟೆವರೆಗೆ, 6) ಟೆಂಡರ ಅರ್ಜಿ ಬೆಲೆ : ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ. ಮೊತ್ತ : ರೂ. 1,61,000.00 8) ಟೆಂಡರ ಫಾರಂ ಸಲ್ಲಿಸುವ ಅಂತೀಮ ದಿನಾಂಕ : 13-02-2020 ಸಾಯಂಕಾಲ 4:00 ಗಂಟೆವರೆಗೆ, 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 14-02-2020 ಸಾಯಂಕಾಲ 4:00 ಗಂಟೆ ನಂತರ, 10) ಆರ್ಥಿಕ ಬಿಡ್ ತೆರೆಯುವ ದಿನಾಂಕ : 20-02-2020 ಬೆಳಗ್ಗೆ 11:00 ಗಂಟೆ ನಂತರ 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಪಂಚಾಯತ ರಾಜ್ ಇಂಜನೀಯರಿಂಗ್ ವಿಭಾಗ, ಪ್ರಗತಿ ಕೃಷ್ಣಾ ಬ್ಯಾಂಕ್ ಎದುರಿಗೆ, ಕುಸನೂರ ರಸ್ತೆ, ರಾಜಾಪೂರ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/1045/ಎಂ.ಸಿ.&ಎ/2019-20

ಕೆ.ಎಂ.ಎಫ್ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ
ಕಹಾಮ ಸಂಕೀರ್ಣ : ಡಾ.ಎಂ.ಹೆಚ್. ಮರಿಗೌಡ ರಸ್ತೆ ಬೆಂಗಳೂರು-560 029
ದೂರವಾಣಿ : 080- 25536625/25536789
IFTNO.ಕಹಾಮ/ಅಭಿ/Airport Parlour/00963/2019-20 ದಿನಾಂಕ : 29.01.2020

ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾ ಮಂಡಳಿಯು ಕೆ.ಐ.ಎ.ಎಲ್‌ನ ಅನುಮೋದಿತ ನಕ್ಷೆ ಮತ್ತು ವಿನ್ಯಾಸದ ಅಡಿಯಲ್ಲಿ ಕೆಲಸ ನಿರ್ವಹಿಸಲು ಅರ್ಹರಿರುವ ಪರಿಣಿತ ಸಂಸ್ಥೆಗಳಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಕೆಲಸಕ್ಕಾಗಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ದ್ವಿಲಕೋಟೆ ಪದ್ಧತಿಯ ಅಲ್ಪಾವಧಿ ಟೆಂಡರ್‌ನ್ನು (Technical and Financial) ಆಹ್ವಾನಿಸಲಾಗಿದೆ. ಆಸಕ್ತರ ವೆಬ್‌ಸೈಟ್ https://www.epoc.karantaka.gov.in ಮೂಲಕ ಟೆಂಡರನ್ನು ಸಲ್ಲಿಸಬಹುದಾಗಿದೆ.

ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.	ಇ.ಎಂ.ಡಿ. ರೂ.	ಮುಕ್ತಾಯದ ಅವಧಿ
ಬೆಂಗಳೂರಿನ ಕೆಂಪೇಗೌಡ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣದ QUAD ZONE ನಲ್ಲಿ ಹೊಸದಾಗಿ ನಂದಿನಿ ಹೈಟೆಕ್ ಪಾರ್ಲರ್ ಸ್ಥಾಪಿಸುವ ಕೆಲಸ.	53.32 ಲಕ್ಷಗಳು	1,10,000/-	02 ತಿಂಗಳು

1) ಟೆಂಡರ್ ಷೆಡ್ಯೂಲ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 03-02-2020 ರಿಂದ 13-02-2020 ರ ಸಾಯಂಕಾಲ 4.00 ಗಂಟೆಯವರೆಗೆ.
2) ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ 13-02-2020 ರ ಸಾಯಂಕಾಲ 4.00 ಗಂಟೆಯವರೆಗೆ.
3) ಟೆಂಡರ್‌ಗಳನ್ನು (Cover - 1) ತೆರೆಯುವ ದಿನಾಂಕ 15-02-2020 ರಂದು ಬೆಳಗ್ಗೆ 11.30 ಗಂಟೆಗೆ.

ಕರ್ನಾಟಕ ಹಾಲು ಮಹಾಮಂಡಳಿ ಪರವಾಗಿ
ಸಹಿ/- ನಿರ್ದೇಶಕರು (ಅಭಿಯಂತರರು)